# ಪರಿವಿಡಿ


| | | |
|---|---|---|
| ಉಷೆಗೆ | .... | ೧ |
| ನೀನೆ ನನಗೆಲ್ಲ | .... | ೨ |
| ಕತ್ತಲೇ ಉಳಿದ ಬಗೆ ? | .... | ೩ |
| ಯಾವ ಹಾಡನು ನಾ ಹಾಡಲಿ ? | .... | ೪ |
| ಹಗಲು – ಹರಿಗೋಲು | .... | ೫ |
| ಹೋದಳುಷೆ – ಬಂತು ನಿಶೆ | .... | ೬ |
| ಬೆಳಗಾಯಿತೇಳು ಉಷೆ | .... | ೮ |
| ಉಷೆ ಬಂದು ನಕ್ಕಾಗ | .... | ೯ |
| ನನ್ನ – ನಿನ್ನ ಅಂತರ | .... | ೧೦ |
| ಅರೆ ಕಳೆದಿದೆ ರಾತ್ರಿ | .... | ೧೧ |
| ಮದುವೆಯಶಾಯಿತು ಉಷೆಗೆ | .... | ೧೨ |
| ಹಗಲಿದೊ ಮುಗಿಯುತ ಬಂತು | .... | ೧೩ |
| ಕನಸಿನ ಮೋಡಿ | .... | ೧೫ |
| ಕನ್ನಡ | .... | ೧೬ |
| ಉಷೆಯೆನ್ನ ಬಾಳನಗೆ | .... | ೧೭ |
| ಆ ಕಾಲ ಅಳಿದಿಹುದು | .... | ೧೮ |
| ಇರುಳಾಗಲಿ ಕವಿದಿದೆ, ಗೆಳತಿ ! | .... | ೧೯ |
| ನೋಡು ಉಷೆ ! | .... | ೨೦ |
| ಮುರುಕು ಮಂಟಪ | .... | ೨೧ |
| ಆ ಸಮುದ್ರದಾಚೆಯಲ್ಲಿ | .... | ೨೨ |
| ಒಂದೆ ಒಲವು | .... | ೨೪ |

ಬೆಳಗು ನನ್ನ ಉಷೆ ! .... ೨೫
ಇನ್ನೆಲ್ಲಿ ಬಾಳಿನುಷೆ ? .... ೨೬
ಮಲಗು ಮಲಗೆನ್ನೆದೆಯ ಮಂಟಪದ ಮೂರ್ತಿ .... ೨೭
ಓ ತಾಯಿ ! .... ೨೮
ಹೃದಯ ಒಲವಿಗೆ ಅಲ್ಲದಿನ್ನೇತಕೆ ? .... ೨೯
ನೀವು ಹೆಂಗಸರಂತು ಎಳೆಯ ಮಕ್ಕಳ ಹಾಗೆ .... ೩೦
ಹೊಸ ವರ್ಷವು ಬಂದಿದೆ, ಗೆಳತಿ ! .... ೩೧
ಜೀವನದ ರೂಪನ್ನೆ ಬದಲಿಸುವ, ಬಾ ! .... ೩೨
ಹೃದಯದಲಿ ಕೂಡಿಯಾಡುವ ಹೋಳಿ .... ೩೪
ನಸು ಬೆಳಕಲಿ ಮುತ್ತಿತು ಚಂದ್ರನ ರಾಹು .... ೩೫
ಒಮ್ಮೊಮ್ಮೆ ಎನಿಸುವುದು ! .... ೩೬
ಸ್ವರ್ಗದಲಿ ದೇವ ನಗುತಿಹನೇನು ? .... ೩೭
ಚಂದ್ರ — ಚಕೋರಿ .... ೩೮
ಎದೆ ತಂತಿ ಮಿಡಿದಾಗ .... ೪೦
ಓ ಮಧುರ ಮಾರು ನುಡಿ ! .... ೪೧
ಕೋಗಿಲೆಯ ಪಾಡು .... ೪೨
ಸುಂದರತೆಯಾನಂದ .... ೪೫
ಜಗ ಬದಲಾದರು ಜೀವನ ಬದಲದು ! .... ೪೬
ಯಾವುದ ನೆನೆಯಲಿ, ಯಾವುದ ಬಿಡಲಿ ? .... ೪೭
ಓ ಬೆಂಕಿ ! .... ೪೮
ನನ್ನ ವೀಣೆಯು ಮಲಗಿದೆ ! .... ೪೯
ಅಂದು — ಇಂದು .... ೫೦
ಗೆಳತಿ, ನೆನಪೇತಕೆ ಬರುವುದೊ ? .... ೫೧

*

# ಮೊದಲ ಮಳೆ

ಮೊದಲ ಮಳೆ ಬಂದಿಹುದು ಬೇಸಿಗೆಯೊಳಿಂದು
ಭುವಿ ಕಾದು ನಿಂದಿಹುದು ಬರುವುದೇ ಎಂದು
— ಕಾತರದಿ ಬೆಂದು

ಸಪ್ತ ರಾಗದ ದನಿಯ ಕೇಳಿದಂತೆ
ಸುಪ್ತ ಸ್ವರಗಳ ಮುತ್ತು ಚೆಲ್ಲಿದಂತೆ
ತಪ್ತ ಬಾಳುವೆಯೊಳಗ ಬೇಗೆಯನು ಅರಿತಂತೆ
ಸುತ್ತೆಲ್ಲ ಸೇರುತಿವೆ ಮೋಡ ಸಂತೆ.

ಕಾದಲರು ಕಾಣುವರು ನಗೆಗಣ್ಣಿನಿಂದ ;
ಒಬ್ಬರೊಬ್ಬರ ಹೃದಯದೊಲವಿನಾನಂದ.
ಪೂರ್ವ ಗಾಳಿಯ ತಂಪು ಮೈದೋರಿ, ನಲವಿಂದ
ಎದೆಯ ಬೆಂಕಿಯು ಮೈಗೆ ನೀಡಿಹುದು ಬಂಧ !

ದೂರ ನೀಲದಲೇನೊ ಕೂಡಿ ನೀಲ,
ಮೂಡಿ ಬಂದಿತು ಹಿಂದೆ ಮೇಘಜಾಲ ;
ಗುಡುಗು ಸಿಡಿಲಿನ ಮೊರೆತದೆದೆಯ ಕಲ್ಲೋಲ,
ನಡುವೆ ಮಿಂಚಿನ ಮಳೆಯ ಹನಿಗಳಾಲೋಲ !

ಹಸುರು ಹೂ ಚೆಲ್ವಿಕೆಯ ಹಸದ ನೀಡಿ,
ಕಲ್ಲೆದೆಗು ತಾಕಿಸುತ ಒಲವ ಮೋಡಿ,
ಎದೆ ತುಂಬಿ, ಕಾಲುವೆಯು ಮುಂದೆ ಮುಂದೋಡಿ
ಹಚ್ಚ ಬಾಳಿನ ಹಸದ ತರುತಿಹುದು ನೋಡಿ !

